**ಕರೋನಾ ಸೋಂಕು ಪರಿಸ್ಥಿತಿಯಲ್ಲಿ ಅವಶ್ಯಕ ವಸ್ತು ಪೂರೈಕೆಗೆ ಕರ್ನಾಟಕ ಸರಕಾರವು ತೆಗೆದುಕೊಳ್ಳಬೇಕಾದ ಕ್ರಮಗಳು.**

ಮುಂದಿನ 21 ದಿನಗಳ ಕಾಲ ಪೂರ್ಣ ನಿರ್ಬಂಧದ ಕುರಿತಾದ ಅವಶ್ಯ ಆಜ್ಞೆಗಳು ಬಂದಿದ್ದು, ಕರ್ನಾಟಕದ ಮಟ್ಟಿಗೆ ಈ ನಿರ್ಬಂಧ ಒಂದು ತಿಂಗಳು ಮೀರಲಿದೆ. ಕೋವಿಡ್– 19 ಹರಡುವುದರ ವಿರುದ್ಧ ಸರಕಾರ ನಡೆಸುತ್ತಿರುವ ಈ ಹೋರಾಟ ಮತ್ತು ಕ್ರಮಗಳನ್ನು ಬೆಂಬಲಿಸುತ್ತೇವೆ. ಜನರ ಆಹಾರ ಭದ್ರತೆ ಮತ್ತು ಇತರ ಅಗತ್ಯಗಳ ಮೇಲೆ ಇದರ ಪರಿಣಾಮವನ್ನು ಮನಗಂಡು ಈ ಕೆಳಕಂಡ ಕ್ರಮಗಳನ್ನು ತಕ್ಷಣವೇ ಗಮನಿಸಬೇಕೆಂದು ನಾವು ಸಲಹೆ ನೀಡುತ್ತಿದ್ದೇವೆ. ಈ ಕ್ರಮಗಳ ಮೂಲಕ ಜನರು ಈ ನಿರ್ಬಂದದಲ್ಲಿ ಯಾವುದೇ ಹಸಿವಿನ ಭಯವಿಲ್ಲದೇ, ಉದ್ಯೋಗ, ಕೂಲಿ ಕಳಕೊಳ್ಳುವ ಭಯವಿಲ್ಲದೇ ಭಾಗವಹಿಸಿ ತಮ್ಮ ಆರೋಗ್ಯವನ್ನೂ ಇತರರ ಆರೋಗ್ಯವನ್ನೂ ರಕ್ಷಿಸಬಹುದು.

ಕರ್ನಾಟಕ ಸರಕಾರವು ಈ ಕೆಳಕಂಡ ನಿರ್ದಿಷ್ಟ ಕ್ರಮಗಳನ್ನು ಗಮನಿಸಬೇಕೆಂದು ಒತ್ತಾಯಿಸುತ್ತೇವೆ.

1. **ಸವಲತ್ತುಗಳ ಅಗತ್ಯ.**

| **ಅವಶ್ಯಕತೆ** | **ಸವಲತ್ತು** | **ಅನುಷ್ಠಾನದ ಏಜೆನ್ಸಿ/ಪೂರೈಕೆ ವಿಧಾನ** | **ಕೇಂದ್ರ ಸರ್ಕಾರದ ಪ್ರಧಾನ್ ಮಂತ್ರಿ ಗರೀಭ್ ಕಲ್ಯಾಣ್ ಯೋಜನೆಯಲ್ಲಿ ಏನು ಕೊಡಲಾಗಿದೆ ಹಾಗು ಅದರ ಮೇಲು ತೆಗೆದುಕೊಳ್ಳಬೇಕಾದ ಕ್ರಮ** |
|---|---|---|---|
| **ಆಹಾರ ಭದ್ರತೆ** | 1. ಒಂದು ತಿಂಗಳಿಗಾಗುವಷ್ಟು ಅಕ್ಕಿ/ಗೋಧಿ/ರಾಗಿ,ಬೇಳೆಕಾಳು, ಅಡುಗೆ ಎಣ್ಣೆ, ಬೆಲ್ಲ, ಮಸಾಲೆ, ಸೋಪು ಇನ್ನಿತರೇ ವಸ್ತುಗಳ ಪ್ಯಾಕೆಟುಗಳನ್ನು ಎಲ್ಲಾ ಮನೆಗಳಿಗೂ ( ರೇಷನ್ ಕಾರ್ಡ್ ಹೊಂದಿರಲಿ/ಬಿಟ್ಟಿರಲಿ) ಪೂರೈಸುವುದು<br>2. ಉಚಿತ ಅಡುಗೆ ಅನಿಲ<br>3. ಮೇ ಅಂತ್ಯದ ವರೆಗೆ ಬೇಯಿಸಿದ ಆಹಾರವನ್ನು ದಿನಕ್ಕೆರಡು ಬಾರಿ ಅವಶ್ಯವಿರುವವರಿಗೆ ಪೂರೈಸುವುದು | ಆಹಾರ ಮತತು ನಾಗರಿಕಪೂರೈಕೆ ಇಲಾಖೆ ಮತ್ತು ಸ್ಥಳೀಯಸಂಸ್ಥೆಗಳು<br><br>ಬಿಸಿ ಊಟ ಕೇಂದ್ರ, ಅಂಗನವಾಡಿ, ಇಂದಿರಾ ಕ್ಯಾಂಟೀನ್, ಆಶ್ರಯ ಕೇಂದ್ರ, ಸ್ಟೇಡಿಯಂಗಳು,ಶಾಲಾ ಮೈದಾನಗಳಲ್ಲಿ<br>ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳು | ಪಡಿತರ ಚೀಟಿ ಉಳ್ಳವರಿಗೆ ಅವರಿಗೆ ಸಾಮಾನ್ಯವಾಗಿ ನೀಡುವ ಅಕ್ಕಿ/ಗೋದಿ ಪ್ರಮಾಣವನ್ನು ಹೆಚ್ಚಿಸಿ, ಎರಡರಷ್ಟು ನೀಡಲಾಗುವುದು. ಒಂದು ಕಿಲೋ ಬೇಳೇ ನೀಡಲಾಗುವುದು<br><br>**ಕೊರತೆ**<br>ಎಲ್ಲರಿಗೂ ಲಭ್ಯವಿಲ್ಲ. ಪಡಿತರ ಚೀಟಿ ವಿಲ್ಲದ ವಲಸಗಿರಿಗೆ ಈ ಯೋಜನೆ ಅನ್ವಯವಿಲ್ಲ<br><br>ಆರೋಗ್ಯಕರ ಜೀವನ ನೀಡಲು ಇನ್ನಷ್ಟು ಬೇಳೆ ಹಾಗು ಇತರೆ ಆಹಾರ ಪದಾರ್ಥಗಳು ಬೇಕಾಗುತ್ತದೆ |

| | | | |
|---|---|---|---|
| | 4. ತರಕಾರಿ,ಹಣ್ಣು, ಮೊಟ್ಟೆ ಮತ್ತು ಮಾಂಸದ ಬೆಲೆಗಳನ್ನು ಇಳಿಸಿ ಅವುಗಳು ಹಾಪ್ ಕಾಮ್ಸ್ ಮೂಲಕ ಲಭ್ಯವಿರುವಂತೆ ನೋಡಿಕೊಳ್ಳುವುದು<br>5. ಆಹಾರದ ಕಾಳ ಸಂತೆ ದಾಸ್ತಾನು ನಿಲ್ಲಿಸಲು ಆಜ್ಞೆ ಹೊರಡಿಸಿ ಬೆಲೆ ಏರಿಕೆ ನಿಯಂತ್ರಿಸಲು ಬೆಲೆ ನಿಯಂತ್ರಣದ ಆಜ್ಞೆ | ಹಾಪ್ ಕಾಮ್ಸ್ ಇವನ್ನು ಸಂಗ್ರಹವಿಟ್ಟು ಸದಾ ತೆರೆದಿರುವಂತೆ ನೋಡಿಕೊಳ್ಳುವುದು. ತತ್ಸಂಬಂಧಿ ಇಲಾಖೆ | ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |
| **ತುರ್ತು ಪರಿಹಾರ** | ಎಪ್ರಿಲ್ ಮತ್ತು ಮೇ ತಿಂಗಳುಗಳಿಗೆ ಅನ್ವಯಿಸುವಂತೆ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯನ್ವಯ ಗುರುತಿಸಲಾದ ಕುಟುಂಬಗಳಿಗೆ ಹಾಗೂ ವಲಸೆ ಕಾರ್ಮಿಕರ ಕ್ಯಾಂಪುಗಳ ಕುಟುಂಬಗಳಿಗೆ ರೂ.14ಸಾವಿರ ತುರ್ತು ಪರಿಹಾರ ನೀಡುವುದು | ಎಲ್ಲಾ ಪರಿಹಾರಗಳೂ ನಗದು ರೂಪದಲ್ಲಿ ಮನೆ ಬಾಗಿಲಿಗೆ. ಕಂದಾಯ ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳು | ಜನ್ ಧಾನ್ ಯೋಜನೆಯಡಿ ಕಾತೆ ಇರುವ 20 ಕೋಟಿ ಮಹಿಳೆಯರಿಗೆ ತಿಂಗಳಿಗೆ 500 ರುಪಾಯಿ<br><br>3 ಕೋಟಿ ಹಿರು ನಾಗರೀಕರು, ವಿಕ್ಲ ಚೇತನರು ಹಾಗು ವಿಧವೆಯರಿಗೆ 3 ತಿಂಗಳಿಗೆ ಸೇರಿ 1000 ರುಪಾಯಿ<br><br>**ಕೊರತೆ**<br>ಇದು 130 ಕೋಟಿ ಜನರಲ್ಲಿ ಅತಿ ಕಡಿಮೆ ಜನರಿಗೆ ತಲುಪುತ್ತದೆ ಹಾಗು ನೀಡಿರುವ ಆರ್ಥಿಕ ಶಾಯ ಕೂಡ ಬಹಳ ಅಲ್ಪ ಮಟ್ಟದ್ದು |
| **ಆರ್ಥಿಕ ಭದ್ರತೆ** | 1. ಎಲ್ಲಾ ಕಾರ್ಮಿಕರಿಗೂ, (ಗುತ್ತಿಗೆ ಹಾಗೂ ಉಪ ಗುತ್ತಿಗೆ ಕಾರ್ಮಿಕರನ್ನೂ ಸೇರಿಸಿ) ಸಂಬಳ ಸಹಿತ ರಜೆ ನೀಡುವಂತೆ ಉದ್ಯಮಿಗಳಿಗೆ ಆಜ್ಞೆಮಾಡುವುದು | ಉದ್ಯೋಗದಾತರು ಬ್ಯಾಂಕ್ ಖಾತೆ ಹೊಂದಿಲ್ಲದ ಕಾರ್ಮಿಕರಿಗೆ ಅವರ ಮನೆ ಬಾಗಿಲಿಗೇ ವೇತನ ತಲುಪಿಸುವುದು | ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |
| | 2. ಉದ್ಯೋಗ ಖಾತರಿ ಯೋಜನೆಯ ಎಲ್ಲಾ ಬಾಕಿಯನ್ನು ಕಾರ್ಮಿಕರಿಗೆ ಎಪ್ರಿಲ್ ಮಾಸದ ಮೊದಲ ವಾರದೊಳಗೆ ನೀಡುವುದು | ನಗದು ನೀಡುವುದುಮತ್ತುಮನೆ ಬಾಗಿಲಿಗೆ ತಲುಪಿಸುವುದು ಹೊಣೆಗಾರಿಕೆ:ಕಂದಾಯ ಇಲಾಖೆ | ಉದ್ಯೋಗ ಖಾತರಿ ಯೋಜನೆಯ ದಿನ್ದ ವೇತನ 20 ರುಪಾಯಿ ಹೆಚ್ಚು ಮಾಡಲಾಯಿತು<br>**ಕೊರತೆ :** ಬಾಕಿ ಇರುವ ವೇತನ ಪಾವತಿ ಬಗ್ಗೆ ಯಾವುದೆ ಘೋಶಣೆ ಇಲ್ಲ ; ಈ ಯೋಜನೆ ಯಡಿ ಕಾಮಗಾರಿ ಮುಂದುವರೆಯುತ್ತೋ ಇಲ್ಲವೋ ಎನ್ನುವುದುರ ಬಗ್ಗೆ ಯಾವುದೇ ಘೋಷಣೆ ಇಲ್ಲ |
| | 3. ನಿರ್ಬಂಧದ ಅವಧಿಯಲ್ಲಿ ಎಲ್ಲಾ ನೋಂದಾಯಿತ ಉದ್ಯೋಗ ಖಾತರಿ ಯೋಜನೆಯ ಕಾರ್ಮಿಕರಿಗೆ ಪೂರ್ಣ ವೇತನ ನೀಡುವುದು | | ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |

| | | | |
|---|---|---|---|
| | | | |
| | 4. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಉಳಿದ ಕಂತನ್ನು ತಕ್ಷಣವೇ ವರ್ಗಾಯಿಸುವುದು | | ಏಪ್ರಿಲ್ ಮೊದಲನೇ ವಾರದಲ್ಲೇ ಪ್ರಧಾನ್ ಮಂತ್ರಿ ಕಿಸಾನ್ ಸ್ಮಾ್ಮನ್ ಯೋಜನೆಯಡಿಯಲ್ಲಿ 2000 ರುಪಾಯಿ ನೀಡಲಾಗುವುದು<br><br>**ಕೊರತೆ**<br>ಏಪ್ರಿಲ್ ತಿಂಅಗಳಲ್ಲಿ ಈಗಾಗಲೇ 2000 ರುಪಾಯಿ ಕೊಡಬೇಕಿತ್ತು, ಇದು ಹೆಚ್ಚುವರಿ ಅಲ್ಲ. ಈ ಯೋಜನೆಯ ಇನ್ನೆರಡು ಕಂತು , 4,000 ರುಪಾಯಿ ನೀಡಬೇಕು |
| | 5. ಕರ್ನಾಟಕ ಸರಕಾರದ ಸಾಮಾಜಿಕಭದ್ರತಾ ಯೋಜನೆಯ ಎಲ್ಲಾ ಫಲಾನುಭವಿಗಳಿಗೆ ಸಲ್ಲಬೇಕಾಗಿರುವ ಬಾಕಿಯನ್ನು ತಕ್ಷಣವೇ ನೀಡುವುದು | | ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |
| | 6. ಎಲ್ಲಾಪಿಂಚಣಿದಾರರಿಗೆ ಮೂರುತಿಂಗಳ (ಎಪ್ರಿಲ್, ಮೇ,ಜೂನ್) ಪಿಂಚಣಿಯನ್ನು ಮುಂಗಡವಾಗಿ ನೀಡುವುದು. ಈ ಪಿಂಚಣಿಯನ್ನು ದ್ವಿಗುಣಗೊಳಿಸುವ ಅಗತ್ಯವಿದೆ | | ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |
| | 7. ಪಿ.ಎಂ.ಎ.ವೈ ಮತ್ತು ಎಸ್.ಬಿ.ಎಂ. ಯೋಜನೆಯ ಎಲ್ಲಾ ಬಾಕಿಕಂತಿನ ಮೊತ್ತವನ್ನು ನೀಡುವುದು | | ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |
| | 8. ರೈತ, ಕೃಷಿಕೂಲಿಕಾರರ ಮತ್ತು ಇತರ ಶ್ರಮಿಕರ ಎಲ್ಲಾ ಸಾಲಗಳ ವಸೂಲಿ ಮೇಲೆ ನಿರ್ಬಂಧ ಘೋಷಿಸುವುದು. ಕನಿಷ್ಠ ಸುಸ್ತಿ ಬಡ್ಡಿ ರಹಿತ ಮರುಪಾವತಿಯನ್ನು ಮುಂದೂಡುವುದು. ಸಣ್ಣ ಕೈಗಾರಿಕೆ, ಸ್ವ ಉದ್ಯೋಗಿಗಳ, ಆಟೋ, ಟ್ಯಾಕ್ಸಿ ಮತ್ತಿತರ ಸಾಲಗಾರರ ಮಾಸಿಕ ಮರುಪಾವತಿ ಮೊತ್ತ ರೂ.20ಸಾವಿರದ ವರೆಗೆ ಇರುವ ಸಾಲಗಳ ಮರುಪಾವತಿಯನ್ನು ಮುಂದೂಡುವುದು. ಮರುಪಾವತಿಯ ಅವಧಿಯನ್ನು ನಿರ್ಬಂಧ ಅವಧಿ | | ಕೇಂದ್ರ ಬ್ಯಾಂಕ್ ವತಿಯಿಂದ ಸಲಹೆ ಘೋಷಣೆಯಾಗಿದೆ. ಪ್ರತಿಯೊಂದು ಬ್ಯಾಂಕ್ ಇದನ್ನು ಪಾಲಿಸುತ್ತಾರ ತಿಳಿಯದು |

| | | | |
|---|---|---|---|
| | ಮುಗಿದ ಬಳಿಕ ತೀರ್ಮಾನಿಸುವುದು | | |
| | 9. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಂತೆ ಉದ್ಯೋಗ ಖಾತರಿ ಕಾರ್ಮಿಕರನ್ನೂ ಇದೇ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯಿದೆಯಡಿ ನೋಂದಾಯಿಸುವುದು. ತನ್ಮೂಲಕ ವಿಮೆ, ಮಕ್ಕಳಿಗೆ ವಿದ್ಯಾರ್ಥಿ ವೇತನ,ಪಿಂಚಣಿ ಇತ್ಯಾದಿ ಲಭ್ಯವಾಗುವಂತೆ ನೋಡಿಕೊಳ್ಳುವುದು | | ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |
| **ಉದ್ಯೋಗ ಭದ್ರತೆ** | ಯಾವುದೇ ಉದ್ಯೋಗದಾತ ಯಾವುದೇ ಕಾರ್ಮಿಕನನ್ನು ಕೆಲಸದಿಂದ ತೆಗೆದು ಹಾಕದಂತೆ ಅಥವಾ ನಿರ್ಬಂಧದ ಅವಧಿಯ ಗೈರು ಹಾಜರಿಯ ವೇತನ ಕಡಿತ ಮಾಡದಂತೆ ರಾಜ್ಯ ಸರ್ಕಾರ ಆಜ್ಞೆ ಹೊರಡಿಸುವುದು. ಈ ಆಜ್ಞೆಯು ಎಲ್ಲಾ ಸರ್ಕಾರೀ ಅಥವಾ ಖಾಸಗಿ ಉದ್ಯೋಗದಾತರಿಗೆ ಅನ್ವಯವಾಗತಕ್ಕದ್ದು. ವೇತನ ಪಾವತಿಯ ದೃಷ್ಟಿಯಿಂದ ಈ ಅವಧಿಯಲ್ಲಿ ಕಾರ್ಮಿಕನು ಹಾಜರಿದ್ದನೆಂದೇ ಪರಿಗಣಿಸಬೇಕು. ಸಂಸ್ಥೆಯಿಂದ ನೇಮಿತಗೊಂಡ ಎಲ್ಲಾ ನೇರ ಮತ್ತು ಪರೋಕ್ಷ ಕಾರ್ಮಿಕರಿಗೂ ಇದು ಅನ್ವಯವಾಗುತ್ತದೆಂದು ಸ್ಪಷ್ಟೀಕರಣ ನೀಡಬೇಕು. ಮತ್ತು ಈ ಘೋಷಣೆಯನ್ನು ವೃತ್ತಪತ್ರಿಕೆ ಮತ್ತಿತರ ಮಾಧ್ಯಮಗಳ ಮೂಲಕ ಪ್ರಚುರಗೊಳಿಸಬೇಕು | ಕಾರ್ಮಿಕ ಇಲಾಖೆ | ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |
| **ಮುಂಜಾಗೃತಾ ಕ್ರಮಗಳು** | 1. ಎಲ್ಲಾ ಕೊಳಚೆ ಮತ್ತು ವಲಸೆ ಕಾರ್ಮಿಕರ ಕೇಂದ್ರಗಳಲ್ಲಿ ಆರೋಗ್ಯ ಮತ್ತು ಅರಿವು ಕಾರ್ಯಕ್ರಮ. (ರಾಜ್ಯ ಮತ್ತು ಪರರಾಜ್ಯಗಳ ವಲಸೆ ಕಾರ್ಮಿಕರನ್ನೂ ಸೇರಿಸಿ).<br>2. ಪೌರ ಕಾರ್ಮಿಕರ ಸಹಿತ ಎಲ್ಲಾ ಮುಂಚೂಣಿ ಕಾರ್ಮಿಕರಿಗೆ ರಕ್ಷಣಾ ಕವಚ, ದಿನವಹಿ ಆರೋಗ್ಯ ತಪಾಸಣೆ, ಸಾರಿಗೆ ವ್ಯವಸ್ಥೆ ಮತ್ತು ಮಾನಸಿಕ ಸಮಾಲೋಚನೆಗಳನ್ನು ಖಚಿತಪಡಿಸಬೇಕು. ಈ ಕಾರ್ಮಿಕರಿಗೆ ವಿಶೇಷ ಭತ್ತೆಯನ್ನೂ ನೀಡಬೇಕು.<br>3. ಮಾಹಿತಿ ಮಿತ್ರರ ಜಾಲವೊಂದನ್ನು ಸ್ಥಾಪಿಸುವುದು. ಇವರು ಎಲ್ಲಾ ಸಾಮಾಜಿಕ | ಆರೋಗ್ಯ ಇಲಾಖೆ, ಸ್ಥಳೀಯ ಸಂಸ್ಥೆಗಳು ಮತ್ತು ಕರ್ನಾಟಕ ಕೊಳಚೆ ಅಭಿವೃದ್ಧಿ ನಿಗಮ<br><br>ಸ್ಥಳೀಯ ಸಂಸ್ಥೆಗಳು | ಆರೋಗ್ಯ ಕಾರ್ಮಿಕರಿಗೆ ವಿಷೇಶ ಆರೋಗ್ಯ ವಿಮೇ ಯೋಜನೆ ಕೋವಿಡ್ ಚಿಕಿತ್ಸೆ ನೀಡುತ್ತಾ ಅಪಾಯಕ್ಕೆ ಒಳ್ಳಾದವರಿಗೆ 50 ಲಕ್ಷ ರುಪಾಯಿ ನಷ್ಟ ಪರಿಹಾರ<br><br>**ಕೊರತೆ**<br>ಇದು ಬಿಟ್ಟು ಯಾವುದೇ ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |

| | | | |
|---|---|---|---|
| | ಮಾಧ್ಯಮಗಳಮೂಲಕ ಮೊಹಲ್ಲಾ– ಹಳ್ಳಿಗಳಲ್ಲಿ, ರೋಗ ತಡೆಯುವ ಕ್ರಮ, ಪರೀಕ್ಷಾ ಕೇಂದ್ರಗಳು, ಸಹಾಯವಾಣಿ, ಸಾರಿಗೆ ಸೌಲಭ್ಯ ಮತ್ತು ಅವಶ್ಯ ವಸ್ತುಗಳಲಭ್ಯತೆ ಕುರಿತು ಮಾಹಿತಿ ನೋಡುವರು.<br>4. ಮನೆಗಳಸುತ್ತಮುತ್ತ; ವಿಶೇಷತಃ ಕೊಳಚೆ ಪ್ರದೇಶ ಮತ್ತು ವಲಸೆ ಕಾರ್ಮಿಕ ತಾಣಗಳಲ್ಲಿ ಶುಚಿತ್ವವನ್ನು ಖಚಿತಪಡಿಸುವುದು | ಆರೋಗ್ಯ ಇಲಾಖೆ<br><br>ಆರೋಗ್ಯ ಇಲಾಖೆ, ಸ್ಥಳೀಯ ಸಂಸ್ಥೆಗಳು ಮತ್ತು ಕರ್ನಾಟಕ ಕೊಳಚೆ ಅಭಿವೃದ್ಧಿ ನಿಗಮ | |
| **ಆರೋಗ್ಯ** | 1. ರಾಜ್ಯದ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೊಗ್ಯ ಕೇಂದ್ರಗಳು ಮತ್ತು ತಾಲೂಕು, ಜಿಲ್ಲಾ ಆಸ್ಪತ್ರಗಳು ಪೂರ್ಣ ಕಾರ್ಯಶೀಲ ಸ್ಥಿತಿಯಲ್ಲಿರುವಂತೆ ಸರಕಾರಿ ಆಜ್ಞೆ ಹೊರಡಿಸುವುದು. ಈ ಮೂಲಕ ವಿಕೇಂದ್ರೀಕೃತ ಮಟ್ಟದಲ್ಲಿ ಅವಶ್ಯ ಔಷಧಿ ಮತ್ತು ಶುಶ್ರೂಷಾ ವಸ್ತುಗಳ ದಾಸ್ತಾನನ್ನು ಖಚಿತಪಡಿಸುತ್ತದೆ; ಅಷ್ಟೇ ಅಲ್ಲ, ತಾಲೂಕು ಮತ್ತು ಜಿಲ್ಲಾ ಕೇಂದ್ರಗಳ ಆಸ್ಪತ್ರೆಗಳಿಗೆ ನುಗ್ಗುವುದನ್ನು ತಡೆಯಬಹುದು.<br>2. ತುರ್ತು ವೈದ್ಯಕೀಯ ಅಗತ್ಯವಿರುವವರು ಕರೆ ಮಾಡಲು ಒಂದು ಸಹಾಯವಾಣಿಯನ್ನು ತಕ್ಷಣವೇ ಸ್ಥಾಪಿಸಬೇಕು. (ಸ್ವಂತವಾಹನವಿಲ್ಲದ/ಕೌಟುಂಬಿಕ ಸಹಾಯಕರಿಲ್ಲದ/ ಹಿರಿಯನಾಗರಿಕರು/ ದೈಹಿಕ ತೊಂದರೆ ಇರುವ ನಾಗರಿಕರಿಗಾಗಿ) | ಆರೋಗ್ಯ ಇಲಾಖೆ | ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |
| **ವಸತಿ** | 1. ಬಾಡಿಗೆ ಪಾವತಿಸದ ಕಾರಣಕ್ಕೆ ಬಾಡಿಗೆದಾರರನ್ನು ಹೊರಹಾಕದಂತೆ ನಿರ್ಬಂಧಿಸುವ ಆಜ್ಞೆ | ನಗರಾಭಿವೃದ್ಧಿಇಲಾಖೆ | ಇದರ ಬಗ್ಗೆ ಯವುದೇ ಯೋಜನೆ/ಕ್ರಮ ಘೋಷಿಸಿಲ್ಲ |

| | | | |
|---|---|---|---|
| | ಹೊರಡಿಸುವುದು.<br>2. ಯಾವುದೇ ಮನೆ ಅಥವಾ ಕೊಳಚೆ ಪ್ರದೇಶಗಳ ನಿರ್ಮೂಲನೆ ನಿಷೇಧಿಸುವ ಘೋಷಣೆ ಮಾಡುವುದು<br>3. ನೀರು ಮತ್ತು ವಿದ್ಯುತ್ ಬಿಲ್ಲುಪಾವತಿಗೆ ಎರಡು ತಿಂಗಳ ವಿನಾಯಿತಿ | ಎಲ್ಲಾ, ಎಸ್ಕಾಮ್‌ಗಳು ಮತ್ತು ಕುಡಿಯುವ ನೀರು ಪೂರೈಕೆ ನಿಗಮಗಳು | |

2. **ಪೂರೈಕೆಯ ವಿಧಿ ವಿಧಾನಗಳು:**

ಈ ತುರ್ತು ಪರಿಹಾರದ ಪ್ಯಾಕೇಜನ್ನು– ಮೂರು ತಿಂಗಳ ಪಡಿತರ ಮತ್ತು ಹಣವನ್ನು ನಗದಾಗಿ ಫಲಾನುಭವಿಗಳ ಮನೆ ಬಾಗಿಲಿಗೆ ತಲುಪಿಸಬೇಕು. ಪಡಿತರದ ಚೀಲ, ಹಣದ ಕವರ್ ಜೊತೆ ಸಹಿಮಾಡಲು ಪೆನ್ನನ್ನೂ ಒದಗಿಸಬೇಕು.

ರಾಜ್ಯ ಸರಕಾರವು ಪಂಚಾಯತ್ ವ್ಯಾಪ್ತಿಯಲ್ಲಿ ಈ ಹಣ ಮತ್ತು ಪಡಿತರ ವಿತರಣೆಗೆ ಸ್ವಸಹಾಯ ಸಂಘಗಳ ಸಹಕಾರವನ್ನು ಪಡೆಯಬಹುದು. ಈ ನಗದು ವಿತರಣೆ ಕುರಿತಂತೆ ದಾಖಲೆಗಳನ್ನು ಪ್ರತ್ಯೇಕ ರಿಜಿಸ್ಟರುಗಳಲ್ಲಿ ಇಟ್ಟು ಸಾರ್ವಜನಿಕವಾಗಿ ಜಾಹೀರುಪಡಿಸಬಹುದು.

ಪಡಿತರ ವಿತರಣೆ, ನಗದು ನೇರ ನೀಡಿಕೆ, ಉದ್ಯೋಗ ಖಾತರಿ ಕೂಲಿ, ಪ್ರ.ಮಂ.ಕಿಸಾನ್ ಸಮ್ಮಾನ್ ಕಂತು ಇತ್ಯಾದಿಗಳನ್ನು ಈ ಕೆಳಗಿನ ವಿಧಾನಗಳ ಮೂಲಕಮಾಡಬಹುದು.

ಅ. ಮನೆಬಾಗಿಲಿಗೆ ನಗದುಮತ್ತು ಪಡಿತರದ ಪ್ಯಾಕೇಟು ತಲುಪಿಸುವುದು.

ಅ. ಪ್ರತೀ ಹಳ್ಳಿಯ ನ್ಯಾಯಬೆಲೆ ಅಂಗಡಿ ಮೂಲಕ ನಿಗದಿ ಪಡಿಸಿದ ಸಮಯದಲ್ಲಿ ಪಡೆಯುವಂತೆ ಸೂಚಿಸುವುದು.ಹ ್ತುಮನೆಗಳ ಸದಸ್ಯರುಗಳಿಗಿಂತ ಜಾಸ್ತಿ ಸೇರದಂತೆ ಈ ಮೂಲಕ ಖಚಿತಪಡಿಸಬಹುದು

**3. ತುರ್ತು ವಸ್ತುಪೂರೈಕೆ ವಿವರಗಳನ್ನು ಜಾಹೀರುಪಡಿಸುವುದು:** ತುರ್ತು ಪೂರೈಕೆ ಅಂತಿಮಗೊಂಡ ಬಳಿಕ ಯಾರ್ಯಾರು ಈ ಪ್ಯಾಕೇಜಿಗೆ ಅರ್ಹರಾಗಿದಾರೆ– ಅವರ ವಿವರ, ನಗದು ಹಣ ಮತ್ತು ಪಡಿತರ ಪ್ಯಾಕೇಟಿನಲ್ಲಿರುವ ವಿವರಗಳು, ಇದರ ಹಂಚಿಕೆಯ ಪ್ರಕ್ರಿಯೆ ಮತ್ತು ತಲುಪಿಸುವ ವಿಧಾನಗಳ ಬಗ್ಗೆ ವಿಸ್ತೃತವಾಗಿ ತಿಳಿಯಪಡಿಸಬೇಕು. ವಾಟ್ಸಾಪ್ ಮತ್ತಿತರ ಮಾಧ್ಯಮಗಳ ಮೂಲಕ ಆಡಿಯೋ–ವಿಡಿಯೋ ಸಂದೇಶಗಳ ಮೂಲಕ ಇದನ್ನು ಮಾಡಬಹುದು.

**4. ದೂರು ನಿವಾರಣೆಯ ಸಂರಚನೆ ಮತ್ತು ಪ್ರಕ್ರಿಯೆ:** ಈ ಪೂರೈಕೆಯಲ್ಲಿ ಸೋರಿಕೆ, ತಲುಪದಿರುವಿಕೆ, ಕಳಪೆ ಪೂರೈಕೆ, ದುರುಪಯೋಗದಂಥಾ ಸಮಸ್ಯೆಗಳ ನಿವಾರಣೆಗೆ ಒಂದು ಏಜೆನ್ಸಿಯನ್ನು ಸರ್ಕಾರ ಸ್ಥಾಪಿಸಬೇಕು. ಇದು ವಿಕೇಂದ್ರಿಕೃತವಾಗಿರಬೇಕು (ಪಂಚಾಯತಿಗೆ ಸಂಪರ್ಕಿಸಿದ ಸ್ಥಳೀಯ, ಜಿಲ್ಲಾಮಟ್ಟದ ಮತ್ತು ನಗರ, ಪಟ್ಟಣ ಸಂಸ್ಥೆಗಳ ಮಟ್ಟದಲ್ಲಿ ಈ ರಚನೆ ಇರಬೇಕು. ಈ ಏಜೆನ್ಸಿಗೆ ದೂರುಗಳ ಮೇಲೆ ಕ್ರಮಕೈಗೊಳ್ಳುವ ಅಧಿಕಾರ ಇರಬೇಕು. ಕಾರ್ಮಿಕ ಸಂಘಟನೆಗಳು ನಾಗರಿಕ ಸಮಾಜದ ಸದಸ್ಯರು ಮತ್ತು ಸ್ಥಳೀಯ ಸ್ವಯಂಸೇವಕರನ್ನು ವೀಕ್ಷಕರನ್ನಾಗಿ ಗುರುತಿಸಬೇಕು. ಈ ಉದ್ದೇಶಕ್ಕೊಸ್ಕರ ವಿಶೇಷ ಸಹಾಯವಾಣಿಯೊಂದನ್ನು ತಕ್ಷಣವೇ ಸಕ್ರಿಯಗೊಳಿಸಬೇಕು.

**5. ಉಸ್ತುವಾರಿ:** ರಾಜ್ಯ ಸರ್ಕಾರವು ತಕ್ಷಣದ ವಿಪತ್ತು ಎದುರಿಸಲು ಕೈಗೊಂಡಿರುವ ವಿವಿಧ ನಿರ್ಣಯಗಳ ಅನುಷ್ಠಾನ, ಉಸ್ತುವಾರಿ ಮತ್ತು ವಿಚಕ್ಷಣೆಯ ಉದ್ದೇಶಕ್ಕೆ ಅಂತರ್ ಇಲಾಖೀಯ ಟಾಸ್ಕ್ ಫೋರ್ಸ್ ೯ ಒಂದನ್ನು ತಕ್ಷಣವೇ ಸ್ಥಾಪಿಸಬೇಕು. ಈ ಕಾರ್ಯಪಡೆಯು ಮೇಲ್ಕಾಣಿಸಿದ ಉದ್ದೇಶಗಳ ಈಡೇರಿಕೆಗೆ ಶ್ರಮಿಸಬೇಕು

* ಕೃತಜ್ಞತೆಗಳು: ಪ್ರೊ.ಜೀನ್ ಡ್ರೆಜ್ ಮತ್ತಿತರರು ಕೇಂದ್ರ ಸರ್ಕಾರಕ್ಕೆ ಮಾರ್ಚ್ ೯ 24ರಂದು ಸಲ್ಲಿಸಿದ ಮನವಿ ದಾಖಲೆಯಿಂದ ಹಲವು ವಿವರಗಳನ್ನು ಪಡಕೊಳ್ಳಲಾಗಿದೆ. ಹಾಗೇ ವಿವಿಧ ಸಂಘಟನೆಗಳು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಮನವಿಗೂ ಆಭಾರಿಯಾಗಿದೆ

********